ಸಂಪುಟ : 40 ಸಂಚಿಕೆ 130 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 06 ಜೂನ್ 2017 ಮಂಗಳವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಇಸ್ರೋ ದಾಖಲೆ: ಮೊದಲನೇ ಪ್ರಯತ್ನದಲ್ಲೇ ಜಿಎಸ್‌ಎಲ್‌ವಿ ಮಾರ್ಕ್-3 ಉಡಾವಣೆ ಯಶಸ್ವಿ

ವಿವರ : ಪುಟ 5



ಸರ್ಕಾರಿ ನೌಕರರ ಭ್ರಷ್ಟಾಚಾರ ಕೇಸುಗಳ ಇತ್ಯರ್ಥಕ್ಕೆ 6 ತಿಂಗಳು ಗಡುವು

ವಿವರ : ಪುಟ 10

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಇಂಗ್ಲೆಂಡ್ -ನ್ಯೂಜಿಲೆಂಡ್ ನಡುವೆ ಪಂದ್ಯ



₹55 Discount Per Gram
Gold 916 ₹ 2748/-
Silver ₹ 41400/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

## ತಾಪಮಾನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಿ

### ಗಿಡ ನೆಟ್ಟರೆ ಸಾಲದು:ವಿಶ್ವಪರಿಸರ ದಿನಾಚರಣೆಯಲ್ಲಿ ನ್ಯಾ. ರಾಜೇಂದ್ರ ಬಾದಾಮಿಕರ

**ತುಮಕೂರು**

ಅಭಿವೃದ್ಧಿಯ ಹೆಸರಿನಲ್ಲಿ ಸಾಕಷ್ಟು ಅರಣ್ಯ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಪೂರಕ ಅಭಿವೃದ್ಧಿಗೆ ನಾವೆಲ್ಲರೂ ಒತ್ತು ನೀಡುವ ಅಗತ್ಯವಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಂದ್ರ ಬಾದಾಮಿಕರ ತಿಳಿಸಿದ್ದಾರೆ.

ನಗರದ ಅಮಾನಿಕೆರೆಯಲ್ಲಿ ಸ್ಮಾರ್ಟ್‌ಸಿಟಿ ಲಿಮಿಟೆಡ್, ಅರಣ್ಯ ಇಲಾಖೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಾವಿರ ಸಸಿ ನೆಡುವ ಕಾರ್ಯಕ್ರಮವನ್ನು ಗಿಡಗಳಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡುತಿದ್ದ ಅವರು, ಪರಿಸರ ದಿನಾಚರಣೆಯ ಹೆಸರಿನಲ್ಲಿ ಸಾಂಕೇತಿಕವಾಗಿ ಗಿಡ ನೆಟ್ಟರೆ ಸಾಲದು, ಅದನ್ನು ಪೋಷಿಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ಆಗ ಮಾತ್ರ ನಮ್ಮನ್ನು ಕಾಡುತ್ತಿರುವ ಜಾಗತಿಕ ತಾಪಮಾನದಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು.

> ಕೈಗಾರಿಕಾ ಕ್ರಾಂತಿಯ ಫಲವಾಗಿ ಹುಟ್ಟಿಕೊಂಡ ಪರಿಸರ ಅಸಮತೋಲನ ಇಂದು ನಮ್ಮೆಲ್ಲರನ್ನು ಕಾಡುತ್ತಿದೆ. ಒಟ್ಟಾರೆ ಭೂಮಿಯ ಶೇ.33ರಷ್ಟು ಇರಬೇಕಾದ ಅರಣ್ಯದ ಪ್ರಮಾಣ ಶೇ.17ಕ್ಕೆ ಬಂದು ನಿಂತಿದೆ. ಮಾನವರು ಅತಿಯಾಗಿ ಬಳಕೆ ಮಾಡುತ್ತಿರುವ ಫ್ರಿಜ್ ಮತ್ತು ಎ.ಸಿ.ಯಿಂದ ಸೂರ್ಯನ ಅತಿ ನೇರಳೇ ಕಿರಣಗಳಿಂದ ಸಂರಕ್ಷಿಸುವ ಓಜೋನ್ ಪದರ ತೆಳುವಾಗಿ ಜನರು ಚರ್ಮದ ಕ್ಯಾನ್ಸರ್ ಮತ್ತಿತರ ರೋಗಗಳಿಗೆ ತುತ್ತಾಗುತ್ತಿದ್ದಾರೆ.
> -ಬಾಬಾ ಸಾಹೇಬ್ ಜಿನರಾಳ್ಕರ್, ನ್ಯಾಯಾಧೀಶ



ವಿವಿಧ ಇಲಾಖೆಗಳು, ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಂದ್ರ ಬಾದಾಮಿಕರ, ನ್ಯಾಯಾಧೀಶ ಬಿ.ಎಲ್.ಜಿನರಾಳ್ಕರ್, ಶಾಸಕ ಡಾ|| ರಫೀಕ್ ಅಹಮದ್ ಇತರರಿದ್ದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಬಾಬಾ ಸಾಹೇಬ್ ಜಿನರಾಳ್ಕರ್ ಮಾತನಾಡಿ, ಕೈಗಾರಿಕಾ ಕ್ರಾಂತಿಯ ಫಲವಾಗಿ ಹುಟ್ಟಿಕೊಂಡ ಪರಿಸರ ಅಸಮತೋಲಮ ಇಂದು ನಮ್ಮೆಲ್ಲರನ್ನು ಕಾಡುತ್ತಿದೆ. ಒಟ್ಟಾರೆ ಭೂಮಿಯ ಶೇ33ರಷ್ಟು ಇರಬೇಕಾದ ಅರಣ್ಯದ ಪ್ರಮಾಣ ಶೇ.17ಕ್ಕೆ ಬಂದು >>> 5ನೇ ಪುಟಕ್ಕೆ

## ಗೃಹಖಾತೆ ತಮ್ಮಲ್ಲೇ ಉಳಿಸಿಕೊಳ್ಳಿ ಮುಖ್ಯಮಂತ್ರಿಗೆ ಆಪ್ತ ಸಚಿವರ ಒತ್ತಡ

**ಬೆಂಗಳೂರು**

ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಅವರು ಗೃಹ ಖಾತೆಗೆ ರಾಜೀನಾಮೆ ನೀಡಿರುವ ಹಿನ್ನಲೆಯಲ್ಲಿ ಆ ಸ್ಥಾನವನ್ನು ನಿಮ್ಮಲ್ಲೇ ಉಳಿಸಿಕೊಳ್ಳಿ ಎಂದು ಸಿಎಂ ಸಿದ್ಧರಾಮಯ್ಯ ಅವರಿಗೆ ಆಪ್ತ ಸಚಿವರು ಒತ್ತಡ ಹೇರಿದ್ದಾರೆ.

ತಮಗೆ ಒತ್ತಡ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಅಧಿವೇಶನ ಮುಗಿಯುವ ತನಕ ಗೃಹ ಖಾತೆಯಲ್ಲಿ ಮುಂದುವರೆಯುವಂತೆ ಪರಮೇಶ್ವರ್‌ರವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಮುಂದಿನ ಸಾಧಕ, ಬಾಧಕಗಳನ್ನು ಪರಿಶೀಲಿಸಿ ನಂತರ ಖಾತೆಯನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕೆ, ಅಥವಾ ಬೇಡವೆ ಎನ್ನುವ ಬಗ್ಗೆಯೂ ಮುಖ್ಯಮಂತ್ರಿ ಅವರು ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ.

ಈ ಮಧ್ಯೆ ಚುನಾವಣೆಯ ವರ್ಷವಾಗಿರುವ ಹಿನ್ನೆಲೆಯಲ್ಲಿ ಗೃಹ ಖಾತೆಯನ್ನು ಯಾರಿಗೂ ನೀಡದೆ ನೀವೇ ಇಟ್ಟುಕೊಳ್ಳಿ. ನಿಮಗೆ ಹೆಚ್ಚಿನ ಶ್ರಮವಾಗದಂತೆ ಇದುವರೆಗೆ ಗೃಹ ಖಾತೆ ಸಚಿವರ ಭದ್ರತಾ ಸಲಹೆಗಾರರಾಗಿದ್ದ ಕೆಂಪಯ್ಯ ಇದ್ದಾರೆ. ಅವರು ಹೆಚ್ಚಿನ ಜವಾಬ್ದಾರಿ ಹೊರುತ್ತಾರೆ ಎಂಬುದು ಈ ಆಪ್ತರು ಒತ್ತಡ ಹೇರಿದ್ದಾರೆ.

ಇದುವರೆಗೆ ಗೃಹ ಸಚಿವರಾಗಿದ್ದ ಪರಮೇಶ್ವರ್ ಅವರು ಹುದ್ದೆಗೆ ರಾಜೀನಾಮೆ ಕೊಡುವ ಮುನ್ನ ಮಾಡಿರುವ ಪೊಲೀಸ್ ವರ್ಗಾವಣೆಗಳ ವಿಷಯದಲ್ಲಿ ಹಲವು ಶಾಸಕರು ತಕರಾರು ಎತ್ತಿದ್ದು ಅದನ್ನು ಪರಿಷ್ಕರಿಸುವ ಅಗತ್ಯವಿದೆ.ಹೀಗಾಗಿ ಬೇರೆ ಯಾರಿಗಾದರೂ ನೀವು ಗೃಹ ಖಾತೆಯನ್ನು ವಹಿಸಿಕೊಟ್ಟರೆ ವರ್ಗಾವಣೆ ಪಟ್ಟಿಯನ್ನು ಪರಿಷ್ಕರಿಸುವುದು ಕಷ್ಟದ ಕೆಲಸವಾಗುತ್ತದೆ ಎಂದು ಈ ಆಪ್ತರು ಮುಖ್ಯಮಂತ್ರಿಗಳಿಗೆ ವಿವರಿಸಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ.

ಈ ಮಧ್ಯೆ ಪರಮೇಶ್ವರ್ ಅವರು ತೆರವು ಮಾಡಿರುವ ಗೃಹ ಖಾತೆಯ ಮೇಲೆ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಕಣ್ಣಿಟ್ಟಿದ್ದು ತಮಗೆ ಆ ಖಾತೆ ಕೊಡಿಸುವಂತೆ ಹೈಕಮಾಂಡ್ ನಾಯಕರ ಮೊರೆ ಹೋಗಿದ್ದಾರೆ.

ಕಳೆದ ವರ್ಷ ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನೇ ನೀಡುವುದಾಗಿ ಹೈಕಮಾಂಡ್ ಭರವಸೆ ನೀಡಿತ್ತು.

ಆದರೆ ಕರ್ನಾಟಕವನ್ನು ಕತ್ತಲೆ ಮುಕ್ತ ರಾಜ್ಯವನ್ನಾಗಿ ಮಾಡುವ ಸಲುವಾಗಿ ನಾನು ಮಂತ್ರಿ ಸ್ಥಾನದಲ್ಲಿ >>> 5ನೇ ಪುಟಕ್ಕೆ

## ವಿಧಾನ ಮಂಡಲದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ

**ಬೆಂಗಳೂರು**

ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ವಿಮಲಾಗೌಡ, ಸ್ವಾತಂತ್ರ್ಯ ಹೋರಾಟಗಾರ ಹೊ.ಶ್ರೀನಿವಾಸಯ್ಯ, ಪತ್ರಕರ್ತರಾದ ಪ್ರೊ.ಎಚ್.ಎಲ್.ಕೇಶವಮೂರ್ತಿ, ಗರುಡನಗಿರಿ ನಾಗರಾಜ್, ನಿರ್ಮಾಪಕಿ ಪಾರ್ವತಮ್ಮ ರಾಜ್ ಕುಮಾರ್ ಸೇರಿದಂತೆ ಹಲವು ಗಣ್ಯರಿಗೆ ವಿಧಾನಮಂಡಲದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭಾಧ್ಯಕ್ಷ ಕೆ.ಬಿ. ಕೆ.ಬಿ.ಕೋಳಿವಾಡ್ ಸಂತಾಪ ಸೂಚಕ ನಿರ್ಣಯ ಮಂಡಿಸಿ, ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಹಾಗೂ ಸದಸ್ಯೆ ವಿಮಲಾಗೌಡ, ಸ್ವಾತಂತ್ರ್ಯ ಹೋರಾಟಗಾರ ಹೊ.ಶ್ರೀನಿವಾಸಯ್ಯ, ಪತ್ರಕರ್ತರಾದ ಪ್ರೊ.ಎಚ್.ಎಲ್.ಕೇಶವಮೂರ್ತಿ, ಗರುಡನಗಿರಿ ನಾಗರಾಜ್, ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್, ವಿಧಾನ ಸಭೆ ಮಾಜಿ ಸದಸ್ಯರಾದ ಎನ್.ವಿ.ಪಾಟೀಲ್, ದೊಡ್ಡಮೇಟಿ ಜ್ಞಾನದೇವ ಶಿವನಾಗಪ್ಪ, ಎಸ್.ವಿ.ಅಶ್ವಥನಾರಾಯಣ ರೆಡ್ಡಿ, ಕೆ.ಮಾದೇಗೌಡ, ಕಲೂತಿ ರಾಮಪ್ಪ ಮೇಳಪ್ಪ, ಸುಭಾಷ್ ಶಂಕರಶೆಟ್ಟಿ ಪಾಟೀಲ್ ಅವರ ಕೊಡುಗೆಯನ್ನು ಸ್ಮರಿಸಿದರು.

ನಿರ್ಣಯ ಬೆಂಬಲಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್, ಕಾನೂನು ಸಚಿವ ಟಿ.ಬಿ.ಜಯಚಂದ್ರ, ಜೆಡಿಎಸ್‌ನ ವೈಎಸ್‌ವಿ ದತ್ತ ಮತ್ತಿತರರು ಮಾತನಾಡಿ, ಮೃತರ ಗುಣಗಾನ ಮಾಡಿದರು.

## ವಾಸದ ಮನೆಗಳ ಸಕ್ರಮಕ್ಕೆ ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ

**ಬೆಂಗಳೂರು:** ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸುವ ದಿನಾಂಕವನ್ನು ಮೂರು ತಿಂಗಳ ಕಾಲ ವಿಸ್ತರಿಸಲು ತೀರ್ಮಾನಿಸಲಾಗಿದ್ದು, ಶೀಘ್ರದಲ್ಲೇ ಈ ಸಂಬಂಧ ಅಧಿಸೂಚನೆ ಹೊರಡಿಸಲಾಗುವುದು ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ತಿಳಿಸಿದ್ದಾರೆ. ಜೆಡಿಎಸ್‌ನ ಕೆ.ಎಂ. ಶಂಕರ ಲಿಂಗೇಗೌಡ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ಕಾಲಾವಕಾಶ ವಿಸ್ತರಿಸುವ ಸಂಬಂಧ ನಿಯಮಗಳಿಗೆ ತಿದ್ದುಪಡಿ ತರಲು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಸಾರ್ವಜನಿಕರಿಂದ ಸಲಹೆ, ಆಕ್ಷೇಪಣೆಗಳನ್ನು ಸ್ವೀಕರಿಸಿ ಪರಿಶೀಲಿಸಿದ ನಂತರ ಮೂರು ತಿಂಗಳು ಅವಧಿ ವಿಸ್ತರಿಸಲಾಗುವುದು ಎಂದಿದ್ದಾರೆ. ಕಂದಾಯ ಕಾಯ್ದೆ 94ಸಿಸಿ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಅರ್ಜಿ ಸಲ್ಲಿಸಿದ ಕೊನೆಯ ದಿನಾಂಕದಿಂದ 2ವರ್ಷದ ಅವಧಿಯೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡಿ ಹಕ್ಕುಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

> ಸ್ವೀಕರಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಅರ್ಜಿ ಸಲಿಸಿದ ಕೊನೆಯ ದಿನಾಂಕದಿಂದ ಎರಡು ವರ್ಷದ ಅವಧಿಯೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡಿ ಹಕ್ಕುಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ.

## ಬೈಲುಕುಪ್ಪೆ ಬೌದ್ಧ ವಿ.ವಿ. ಕುಲಪತಿ ರಿನ್‌ಪೊಂಖೆ ವಿಶ್ಲೇಷಣೆ

# ಯೋಗಕ್ಷೇಮಕ್ಕೆ ಅನ್ವೇಷಣೆಯೇ ಬುದ್ಧನ ಬೋಧನೆ

**ತುಮಕೂರು**

''ಎಲ್ಲರ ಯೋಗಕ್ಷೇಮಕ್ಕಾಗಿ ಅನ್ವೇಷಿಸಬೇಕು. ಇತರರಿಗೆ ಸಹಾಯ ಮಾಡಲು ಯತ್ನಿಸಬೇಕು. ಒಂದು ವೇಳೆ ಅದು ಸಾಧ್ಯವಾಗದಿದ್ದರೆ, ಇತರರಿಗೆ ಕೆಡುಕಾಗುವುದನ್ನಾದರೂ ತಡೆಯಬೇಕು. ಇದೇ ಬುದ್ಧನ ಬೋಧನೆ'' ಎಂದು ಬೈಲಕುಪ್ಪೆಯ ಸೆರಾ ಜೆ ಮೊನಾಸ್ಟಿಕ್ (ಸನ್ಯಾಸಿಗಳ) ವಿಶ್ವವಿದ್ಯಾನಿಲಯದ ನೂತನ ಕುಲಪತಿ ತೆನ್‌ಜೆನ್ ಚ್ಯೂಸಂಗ್ ರಿನ್‌ಪೊಂಖೆ ಅವರು ವಿಶ್ಲೇಷಿಸಿದರು.

ಅವರು ಸೋಮವಾರ ಬೆಳಗ್ಗೆ ತುಮಕೂರು ನಗರದ ತುಮಕೂರು ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ತುಮಕೂರು ವಿಶ್ವವಿದ್ಯಾನಿಲಯ ಮತ್ತು ಸೆರಾ ಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯದ ಸಂಯುಕ್ತಾಶ್ರಯದಲ್ಲಿ ''ಬೌದ್ಧ ಧರ್ಮದಲ್ಲಿ ಸಾಮಾಜಿಕ ಪ್ರಜ್ಞೆ'' ಎಂಬ ವಿಷಯವಾಗಿ ಏರ್ಪಟ್ಟಿದ್ದ ಒಂದು ದಿನದ ಕಾರ್ಯಾಗಾರವನ್ನು ಬೋಧಿ ವೃಕ್ಷಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.



''ಇದೇನು ಬೌದ್ಧ ಚಿಂತನೆಯ ಅಸಾಮಾನ್ಯತೆಯೇನೂ ಅಲ್ಲ; ನೈತಿಕವಾಗಿ ಎಲ್ಲ ಧರ್ಮ ಮತ್ತು ನಂಬಿಕೆಗಳಿಂದಲೂ ನಾವು ಇದನ್ನೇ ಅನ್ವೇಷಿಸುತ್ತೇವೆ'' ಎಂದು ಹೇಳಿದರು.

''ಪ್ರತಿಯೊಂದು ಚೈತನ್ಯ ಯುಕ್ತ ಜೀವಿಯೂ ಒಂದಲ್ಲ ಒಂದು ಜೀವಿತಾವಧಿಯಲ್ಲಿ ಒಂದು ಮತ್ತೊಂದರ ತಾಯಿಯಾಗಿತ್ತೆಂದು ಬೌದ್ಧ ಧರ್ಮದಲ್ಲಿ ನಾವು ನಂಬುತ್ತೇವೆ. ಆದ್ದರಿಂದ ನಾವು ಪ್ರತಿಯೊಂದು ಚೈತನ್ಯಯುಕ್ತ ಜೀವಿಯನ್ನು ತಾಯಿ ರೂಪದ ಚೈತನ್ಯ ಜೀವಿ ಎಂದು ಉಲ್ಲೇಖಿಸುತ್ತೇವೆ. ಹೀಗಾಗಿ ಮಾನವ ಅಥವಾ ಮಾನವೇತರವಾಗಿ ಪ್ರತಿಯೊಂದು ಚೈತನ್ಯ ಜೀವಿಯಲ್ಲೂ ಸಂತೋಷವನ್ನು ನಾವು ಹುಡುಕುತ್ತೇವೆ. ಮತ್ತೊಂದು ಮುಖ್ಯ ಕಾರಣ ಪ್ರತಿಯೊಂದು ಚೈತನ್ಯ ಜೀವಿಯೂ ಸಂತೋಷದಿಂದಿರುವ ಹಕ್ಕನ್ನು ಹೊಂದಿದೆ. ಅಂದರೆ ಪ್ರತಿಯೊಬ್ಬರೂ ಸಂತೋಷವನ್ನು ಅರಸುತ್ತಾರೆಯೇ ವಿನಃ, ದುಃಖವನ್ನಲ್ಲ'' ಎಂದರು.

**ಸಾಮಾಜಿಕ ಪ್ರಜ್ಞೆ ಎಂದರೆ..:** ''ಸಾಮಾಜಿಕ ಪ್ರಜ್ಞೆ ಎಂದರೆ, ಸಮಾಜ ಅಥವಾ ಸಮುದಾಯದ ಸಮಸ್ಯೆಗಳ ಬಗ್ಗೆ >>> 6ನೇ ಪುಟಕ್ಕೆ

## ಸಿಪಿಐ ಆನಂದ್‌ರಿಗೆ ಬೀಳ್ಕೊಡುಗೆ

### ಸಮಾಜದಲ್ಲಿ ಪ್ರತಿಯೊಬ್ಬರ ವ್ಯಕ್ತಿತ್ವವೂ ಮುಖ್ಯ

**ಪಾವಗಡ**

ನಾವು ಮಾಡುವ ಕೆಲಸಕ್ಕೆ ಅನುಗುಣವಾಗಿ ನಿಭಾಯಿಸುವ ಜವಾಬ್ದಾರಿ ಅಧಿಕಾರಿಗೆ ಇರುತ್ತದೆ. ಇದರಂತೆ ಆನಂದ್ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಡಿವೈಎಸ್‌ಪಿ ಕಲೇಶಪ್ಪ ತಿಳಿಸಿದರು.

ಅವರು ಭಾನುವಾರ ಸಿ.ಪಿ.ಐ ಈ ಆನಂದ್ ರವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅಧಿಕಾರದಲ್ಲಿ ಯಾರೇ ಇರಲಿ ನಾವು ಮಾಡುವ ಕೆಲಸ ಅನುಗುಣವಾಗಿ ಸಮಾಜದಲ್ಲಿ ಪ್ರತಿಯೊಬ್ಬರ ವ್ಯಕ್ತಿತ್ವ ಪಾತ್ರ ಅತಿಮುಖ್ಯ ಎಂದರು.

ಅಧಿಕಾರಿಯಾಗಿ ಸಮಾಜದಲ್ಲಿ ಕೆಲಸ ಮಾಡುವ ವ್ಯಕ್ತಿ ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡಿದ ವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ಮರೆಯಲು ಸಾಧ್ಯವೇ ಇಲ್ಲ ಎಂದ ಅವರು, ಆನಂದ್ ಪಾವಗಡ ನಾಗರೀಕರ ಮನಸ್ಸು ಗೆದ್ದಿದ್ದಾನೆ. ಇಲ್ಲಿ ಕಡುಬಡವರಿಗೆ ಎರಡು ಮನೆಗಳನ್ನು ನಿರ್ಮಿಸಿದ್ದು, ಇದು ಸಂತೋಷದಾಯಕವಾಗಿದ್ದು, ಅವರು ದಾವಣಗೆರೆಗೆ ವರ್ಗಾವಣೆಗೊಂಡಿದ್ದು, ಇಲ್ಲಿ ಸಹ ಒಳ್ಳೆಯ ಕೆಲಸ ಮಾಡಿ ಹೆಸರು ಪಡೆಯಲಿ ಎಂದರು.

ಸಿ.ಪಿ.ಐ ಈ.ಆನಂದ್‌ರವರು ಸನ್ಮಾನ ಸ್ವೀಕರಿಸಿ ಮಾತನಾಡಿ ನಾಗರೀಕರ ಸಹಕಾರದಿಂದ ಏನಾದರೂ ಗೆಲ್ಲಬಹುದು ಎಂಬ ಉದಾಹರಣೆಗೆ ನಾನು ಬಂದ ಮೇಲೆ ಕಡುಬಡವರಿಗೆ ಮನೆ ನಿರ್ಮಿಸಿ ಕೊಟ್ಟಿದ್ದೇನೆ. ಒಬ್ಬ ಅಧಿಕಾರಿಗೆ ಸಹಾಯ ಮಾಡಬೇಕು ಸಂಕಲ್ಪ ಇದ್ದರೆ ಮಾತ್ರ ಸಾಧ್ಯ ಎಂದರು.

> ನಾಗರೀಕರ ಸಹಕಾರದಿಂದ ಏನಾದರೂ ಗೆಲ್ಲಬಹುದು ಎಂಬ ಉದಾಹರಣೆಗೆ ನಾನು ಬಂದ ಮೇಲೆ ಕಡುಬಡವರಿಗೆ ಮನೆ ನಿರ್ಮಿಸಿ ಕೊಟ್ಟಿದ್ದೇನೆ. ಒಬ್ಬ ಅಧಿಕಾರಿಗೆ ಸಹಾಯ ಮಾಡಬೇಕು ಸಂಕಲ್ಪ ಇದ್ದರೆ ಮಾತ್ರ ಸಾಧ್ಯ ಎಂದು ಸನ್ಮಾನಿತ ಸಿಪಿಐ ಆನಂದ್ ತಿಳಿಸಿದರು.

ಪಾವಗಡಕ್ಕೆ ಬರುವ ಮುಂಚೆ ಎಲ್ಲರೂ ಅಲ್ಲಿಗೆ ಹೋಗಬೇಡ, ಎಲ್ಲರೂ ಅಮಾನತ್ ಆಗಿ ಬಂದವರೇ ಎಂದು ಹೇಳುತ್ತಿದ್ದರು. ಇಲ್ಲಿಗೆ ಬಂದನಂತರ ಇಲ್ಲಿನ ಜನರು ಹೃದಯವಂತಿಕೆ ಉಳ್ಳಂತವರು. ಅಧಿಕಾರ ಶಾಶ್ವತವಲ್ಲ ನಾವು ಅಧಿಕಾರದಲ್ಲಿ ಇದ್ದಾಗ ಮಾಡಿದ ಕೆಲಸಗಳು ಶಾಶ್ವತ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ಚನ್ನಮಲ್ಲಯ್ಯ, ರೈತ ಸಂಘದ ಅಧ್ಯಕ್ಷರಾದ ಪೂಜಾರಪ್ಪ, ರೈತ ಸಂಘದ ರಾಜ್ಯಾಧ್ಯಕ್ಷರಾದ ವಿ.ನಾಗಭೂಷಣರೆಡ್ಡಿ, ಕೃಷ್ಣರಾವ್, ಲೋಕೇಶ್, ಕೃಷ್ಣಮೂರ್ತಿ, ಆರ್.ಟಿ.ಖಾನ್,ವಿಶ್ವನಾಥ್, ವಸಂತ ಕುಮಾರ್, ಮಾನಂ ವೆಂಕಟಸ್ವಾಮಿ, ಸಿ.ಪಿ.ಐ ಶ್ರೀಶೈಲಮೂರ್ತಿ, ಕೊರಟಗೆರೆ ಸಿ.ಪಿ.ಐ ಮುನಿರಾಜು, ಪಿ.ಎಸ್.ಐಗಳಾದ ಮಂಜುನಾಥ್, ಲಕ್ಷ್ಮಿಕಾಂತ್‌ರವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಮದ್‌ಖಾನ್, ರಿಜ್ವಾನ್, ತಿರುಮಣಿ ಪಿ.ಎಸ್.ಐ ನಾಗಪ್ಪ, ಮಿಡಿಗೇಶಿ ಪಿ.ಎಸ್.ಐ ಹನುಮಂತರಾಯಪ್ಪ, ಮಧುಗಿರಿ ಸಿಪಿಐ ನರಸಿಂಹಮೂರ್ತಿ, ಪಿ.ಎಸ್.ಐ ಪಾಳೇಶ್‌ಪ್ರಭು, ಅಪರಾಧ ಠಾಣೆಯ ಪಿ.ಎಸ್.ಐ ಮಲ್ಲಿಕಾರ್ಜುನ, ಕಾಂತರಾಜು, ರಘು, ಭರತ್, ಜಹೀರ್ ನಾಗರೀಕರು ಹಾಜರಿದ್ದರು.

BENAKA EDUCATION & CHARITABLE TRUST (R)
PRUDENCE INTERNATIONAL SCHOOL
Affiliated to CBSE Vide No.: 830454
Prudence Family Congratulates all the Achivers
3rd BATCH 2016-17, GRADE-X 100% RESULTS
9 STUDENTS OUT OF 32 HAVE SECURED 10 CGPA
ACHUTH G A CGPA: 10
AIFA NAZNEEN S CGPA: 10
ANKUSH C S CGPA: 10
HAMSA P CGPA: 10
JEEVAN B L CGPA: 10
MOHITH R CGPA: 10
NACHIKETHA CGPA: 10
PRERANA S CGPA: 10
VIKAS K CGPA: 10
BAHUROOP CGPA: 9.8
LIKITHA D P CGPA: 9.8
MAANIKA N CGPA: 9.8
PRATHYUN K CGPA: 9.8
SACHIN S CGPA: 9.8
SHREYA P N CGPA: 9.8
SNEHA S CGPA: 9.8
SAI SHARAN CGPA: 9.6
SHANMUKA CGPA: 9.6
YOGESH CGPA: 9.6
BHARGAV CGPA: 9.4
M.KANMANI CGPA: 9.4
DIVAKAR CGPA: 9.2
JALASH S CGPA: 9.2
HARSHITHA CGPA: 9
CHANDAN K CGPA: 8.8
DINESH M CGPA: 8.8
MD. ZAID CGPA: 8.8
NIRANJAN CGPA: 8.8
ROHITH V CGPA: 8.8
DEEKSHA C CGPA: 8.4
UMAIMA CGPA: 8.4
GAGAN CGPA: 8.2
Prof. Renukappa G.S President | Sri. Rudresh Kumar P Secretary | Sri. Vijay Kumar V Kulkarni Principal
Hirehalli, Tumakuru - 572 168. Ph.: 0816-2243726, 9448698844. E-mail: prudenceschool.tmk@gmail.com | www.prudenceschool.com